ಕರ್ನಾಟಕ ಸರ್ಕಾರ

ಸಂಖ್ಯೆ:ಡಿಟಿಇ 51 ಜಿಆರ್‌ಟಿ (2) 2012

ನಿರ್ದೇಶಕರವರ ಕಚೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-1
ದಿನಾಂಕ:11-1-2013

ಸುತ್ತೋಲೆ

ವಿಷಯ: 2012-12 ಸಾಲಿನ ಹಾಗೂ 2013-14 ನೇ ಸಾಲಿನ ಡಿಸೆಂಬರ್ ಅಂತ್ಯದವರೆಗಿನ ಬೋಧನಾ ಶುಲ್ಕವನ್ನು ಸರ್ಕಾರಕ್ಕೆ ಜಮೆ ಮಾಡುವ ಬಗ್ಗೆ.
ಉಲ್ಲೇಖ: ಸರ್ಕಾರಿ ಆದೇಶ ಸಂಖ್ಯೆ: ಇಡಿ 157 ಟಿಪಿಇ 2007, ದಿನಾಂಕ: 2/12/2008

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಸರ್ಕಾರಿ ಆದೇಶದಲ್ಲಿ ಅನುದಾನಿತ ಪಾಲಿಟೆಕ್ನಿಕ್‌ಗಳು ತಮ್ಮ ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಸಂಗ್ರಹಿಸಲಾದ ಬೋಧನ ಶುಲ್ಕದ ಶೇ.50 ನ್ನು ಖಜಾನೆಗೆ ಜಮೆ ಮಾಡಲು ಆದೇಶಿಸಲಾಗಿದೆ.

2011-12 ನೇ ಸಾಲಿನ ಇಲಾಖಾ ಲೆಕ್ಕ ತಪಾಸಣೆ ವೇಳೆ ಕೆಲ ಪಾಲಿಟೆಕ್ನಿಕ್‌ಗಳು ಶೇ.50 ರಷ್ಟು ಬೋಧನಾ ಶುಲ್ಕವನ್ನು ಸರ್ಕಾರಕ್ಕೆ ಜಮೆ ಮಾಡದಿರುವುದು ಕಂಡು ಬಂದಿರುತ್ತದೆ.ಇದಲ್ಲದೇ, ಅನುದಾನಿತ ಸಂಸ್ಥೆಗಳು ಆಯವರ್ಷದ ಡಿಸೆಂಬರ್ ಅಂತ್ಯದೊಳಗೆ ಸಂಗ್ರಹಿಸುವ ಬೋದನಾ ಶುಲ್ಕದ ಶೇ.50ರಷ್ಟು ಮೊತ್ತವನ್ನು ಸರ್ಕಾರಕ್ಕೆ ಜಮೆ ಮಾಡಿದಲ್ಲಿ ಮಾತ್ರ ಜನವರಿ ಮಾಹೇಯಲ್ಲಿ ನೀಡಲಾಗುವ ವೇತನವನ್ನು ಬಿಡುಗಡೆಗೊಳಿಸಲಾಗುವುದೆಂಬ ಬಗ್ಗೆ ಈಗಾಗಲೇ ನಿರ್ದೇಶನವನ್ನು ನೀಡಲಾಗಿದೆ.

ಆದ್ದರಿಂದ ಸಂಬಂಧಪಟ್ಟ ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳು ಸಂಸ್ಥೆಯಲ್ಲಿ 2011-12 ಹಾಗೂ 2012-13 ನೇ ಸಾಲಿನಲ್ಲಿ ಸಂಗ್ರಹಿಸಲಾಗಿರುವ ಬೋಧನಾ ಶುಲ್ಕದ ಸೇ.50 ರಷ್ಟು ಮೊತ್ತವನ್ನು ಲೆಕ್ಕ ಶೀರ್ಷಿಕೆ 0202-02-101-0-06 ಗೆ ಜಮೆ ಮಾಡಿ ಚಲನ್ ಪ್ರತಿಯನ್ನು ಜನವರಿ ತಿಂಗಳ ವೇತನ ಬಿಲ್ಲಿನೊಂದಿಗೆ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯಕ್ಕೆ ಸಲ್ಲಿಸಲು ತಿಳಿಸಲಾಗಿದೆ, ತಪ್ಪಿದ್ದಲ್ಲಿ ಜನವರಿ **2013 ರ ವೇತನವನ್ನು ತಡೆಹಿಡಿಯಲಾಗುವುದು ಈ ಸಂಬಂಧ ಸಂಸ್ಥೆಯ ಪ್ರಿನ್ಸಿಪಾಲರು ನೇರ ಹೊಣೆಗಾರರಾಗಿರುತ್ತಾರೆ ಎಂಬ ಅಂಶವನ್ನು ಈ ಮೂಲಕ ಸ್ಪಷ್ಟವಾಗಿ ತಿಳಿಸಲಾಗಿದೆ.**

ನಿರ್ದೇಶಕರು.

ಇವರಿಗೆ:
ಇಲಾಖೆಯ ಅಧೀನಕ್ಕೊಳಪಟ್ಟಿರುವ ಎಲ್ಲಾ ಖಾಸಗಿ ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ
-ಸೂಕ್ತ ಕ್ರಮಕ್ಕಾಗಿ.